**O.S. No. 487/2022**
**ಪಿ.ಡಬ್ಲ್ಯು– 1**

**ಸಾಕ್ಷಿಯನ್ನು ದಿನಾಂಕಃ 19.02.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಎಂ.ಎಲ್, ವಕೀಲರಿಂದಃ**

ನಮ್ಮ ಜಮೀನಿನ ಸರ್ವೆ ನಂ. 40/4 ಎಂದರೆ ಸರಿ. ಸದರಿ ಜಮೀನಿನ ಪೂರ್ವಕ್ಕೆ - ಚಿಕ್ಕೀರಯ್ಯರವರ ಜಮೀನು, ಪಶ್ಚಿಮಕ್ಕೆ - ದರ್ಮೇಂದ್ರರವರ ಜಮೀನು, ಉತ್ತರಕ್ಕೆ - ಶಾರದಮ್ಮರವರ ಜಮೀನು ಇರುತ್ತದೆ ಎಂದರೆ ದಕ್ಷಿಣಕ್ಕೆ ಶಾರದಮ್ಮರವರ ಜಮೀನು ಇರುತ್ತದೆ ಮತ್ತು ಉತ್ತರಕ್ಕೆ - ನಾಗರಾಜಪ್ಪರವರ ಜಮೀನು ಇರುತ್ತದೆ. ಈ ದಾವೆ ಸಲ್ಲಿಸುವ ಪೂರ್ವದಲ್ಲಿ ಶಾರದಮ್ಮ ಮತ್ತು ಚಿಕ್ಕೀರಯ್ಯರವರಿಗೆ ನೋಟಿಸ್ ಕೊಟ್ಟಿದ್ದೆನು ಎಂದರೆ ಸರಿ. ಸದರಿ ನೋಟಿಸ್ ಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ನಾಗರಾಜಪ್ಪರವರಿಗೂ ನೋಟಿಸ್ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಜಮೀನಿನಲ್ಲಿ ಬೆಳೆದಿದ್ದ ದೊಡ್ಡ ಮರವನ್ನು ನನ್ನ ತಂದೆ ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ. ಸದರಿ ಮರವನ್ನು ಯಾವ ದಾರಿಯ ಮೂಲಕ ತೆಗೆದುಕೊಂಡು ಹೋಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಮರವನ್ನು ಬಸವರಾಜಪ್ಪರವರ ಜಮೀನಿನ ಪಕ್ಕದಲ್ಲಿರುವ ದಾರಿಯ ಮೂಲಕ ತೆಗೆದುಕೊಂಡು ಹೋಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಚಿಕ್ಕೀರಯ್ಯರವರ ಜಮೀನಿನ ಪೂರ್ವ ದಿಕ್ಕಿನಲ್ಲಿ ಉತ್ತರದಿಂದ ದಕ್ಷಿಣಕ್ಕೆ ಬಂಡಿದಾರಿ ಇರುತ್ತದೆ ಎಂದರೆ ಸರಿ. ಸದರಿ ಬಂಡಿದಾರಿ ಸುಮಾಲಾ ನಿಂಗಪ್ಪರವರ ಜಮೀನಿನವರೆಗೆ ಇರುತ್ತದೆ ಎಂದರೆ ಸರಿ. ಸರ್ವೆ ನಂ. 41 ರಲ್ಲಿ ಶಾರದಮ್ಮರವರು 15 ಗುಂಟೆ ಜಮೀನನ್ನು ಖರೀದಿಸಿರುತ್ತಾರೆ ಎಂದರೆ 6 ಗುಂಟೆ ಮತ್ತು 15 ಗುಂಟೆಯನ್ನು ಖರೀದಿಸಿರುತ್ತಾರೆ. ಸದರಿ ಜಮೀನು ಮೂಲತಃ ಚಿಕ್ಕವೀರಯ್ಯರವರಿಗೆ ಸೇರಿದ ಜಮೀನಾಗಿರುತ್ತದೆ ಎಂದರೆ ಸರಿ. ಕ್ರಯಪತ್ರವಾದ ನಂತರ ತಮ್ಮ ಜಮೀನಿಗೆ ಗೇಟ್ ಹಾಕಿರುತ್ತಾರೆ ಎಂದರೆ ನಾವು ನೋಟಿಸ್ ಕಳುಹಿಸಿದ ನಂತರ ಅಳತೆ ಮಾಡಿಸಿಕೊಂಡು ಗೇಟ್

ಹಾಕಿಕೊಂಡಿರುತ್ತಾರೆ. ಈ ದಾವೆ ಹಾಕುವಾಗ ಸೂರ್ಯಕಾಂತಿ ಬೆಳೆದಿದ್ದೆವು. ಸದರಿ ಬೆಳೆಯನ್ನು ಕಟಾವು ಮಾಡಿರುತ್ತೇವೆ. ಸದರಿ ಬೆಳೆಯನ್ನು ಚಿಕ್ಕೀರಯ್ಯರವರ ಜಮೀನಿನ ಮೂಲಕ ಸಾಗಾಟ ಮಾಡಿರುತ್ತೇವೆ. ಚಿಕ್ಕೀರಯ್ಯರವರು ಸದರಿ ಜಮೀನಿನಲ್ಲಿ ಸೂರ್ಯಕಾಂತಿ ಹಾಕಿದ್ದರು. ಅವರು ಕಟಾವು ಮಾಡಿದ ನಂತರ ಅವರ ಜಮೀನಿನ ಮೇಲೆ ನಾವು ಸಾಗಾಟ ಮಾಡಿರುತ್ತೇವೆ.

**2 ನೇ ಪ್ರತಿವಾದಿ ಮತ್ತು ಅವರ ಪರ ವಕೀಲರು ಗೈರುಹಾಜರಿರುತ್ತಾರೆ, ಆದ್ದರಿಂದ ಪಾಟೀಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು**.

**ಮರುವಿಚಾರಣೆಃ** ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,**
**ನಂಜನಗೂಡು.**